1. ರೆಗ್ಯೂಲೇಟೆಟ್ ಮಾರ್ಕೆಟ್ಸ್ ಅಂಡ್ ಮಂಡೀಸ್ ಅಂಡ್ ಬಜಾರ್ಸ್
2. ವುಲನ್ ಅಂಡ್ ಕಾರ್‌ಪೇಟ್ ಮಾರ್ಕೆಟಿಂಗ್ ಅಥವಾ ಶಾಲ್ ವೀವಿಂಗ್ ಎಸ್ಟಾಬ್ಲಿಷ್‌ಮೆಂಟ್ಸ್
3. ಮೆಟಿಲ್ ರೂಲಿಂಗ್ ಅಂಡ್ ರೀ-ರೂಲಿಂಗ್ ಇಂಡಸ್ಟ್ರಿ.
4. ಮೆಟಿಲ್ ರೂಲಿಂಗ್ ಅಂಡ್ ರೀ-ರೂಲಿಂಗ್ ಇಂಡಸ್ಟ್ರೀ (ನಾನ್ ಫೆರ್ರೊಸ್)
5. ಬಿಸ್ಕೆಟ್ಸ್
6. ಮಿನಿ ಸಿಮೆಂಟ್ ಪ್ಲಾಂಟ್.
7. ರಬ್ಬರ್ ಪ್ರಾಡೆಕ್ಟ್ (ಫೋಮ್ ಅಂಡ್ ಕ್ವಾಯರ್ ರಬ್ಬರೈಸ್ಡ್ ಪ್ರಾಡಕ್ಟ್)

ಬೆಂಗಳೂರು ನಗರದ ಫ್ಲೈ ಓವರ್ ಬಗ್ಗೆ.

762 - ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ನಿರ್ಮಾಣ ಮಾಡಲು ಯೋಜಿಸಿರುವ ಫ್ಲೈ ಓವರ್‌ಗಳ ಹಾಗೂ ಸಬ್‌ವೇಗಳ ಸಂಖ್ಯೆ ಎಷ್ಟು?*

ಆ) *ಇವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಫ್ಲೈ ಓವರ್‌ಗಳು - 2

ಸಬ್‌ವೇಗಳು - 3

ಆ) 1991-92ನೇ ಸಾಲಿನಲ್ಲಿ ಪ್ರಾರಂಭವಾಗುವ ಸಾಧ್ಯತೆ ಇದೆ.

ರಾಜ್ಯದಲ್ಲಿರುವ ಕಲ್ಯಾಣ ಮಂದಿರಗಳ ಬಾಡಿಗೆ ಬಗ್ಗೆ.

1681 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿರುವ ಕಲ್ಯಾಣ ಮಂದಿರಗಳ ಬಾಡಿಗೆ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಕಲ್ಯಾಣ ಮಂದಿರಗಳ ಬಾಡಿಗೆಯನ್ನು ಕಡಿಮೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಇ) *ಕಲ್ಯಾಣ ಮಂದಿರಗಳು ವ್ಯಾಪಾರಿ ಕೇಂದ್ರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ. (ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಕಲ್ಯಾಣ ಮಂಟಪಗಳ ಬಾಡಿಗೆ ಸಮಂಜಸವಾಗಿದೆ).

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಉನ್ನತ ಅಧಿಕಾರಿಗಳ ಮೇಲಿನ ಭ್ರಷ್ಟಾಚಾರ, ಆರೋಪದ ಬಗ್ಗೆ.

1682 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದ ಉನ್ನತ ಅಧಿಕಾರ ವರ್ಗದ ಕೆಲವರ ಮೇಲೆ ಭ್ರಷ್ಟಾಚಾರವೂ ಸೇರಿದಂತೆ ಅನೇಕ ಆರೋಪಗಳ ಬಗ್ಗೆ ಸಿ.ಓ.ಡಿ ತನಿಖೆ ನಡೆದು, ಈ ತನಿಖೆಯ ವರದಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಉನ್ನತ ಅಧಿಕಾರ ವರ್ಗದ ಕೆಲವರ ಮೇಲೆ ಭ್ರಷ್ಟಾಚಾರ ಸೇರಿದಂತೆ, ಅನೇಕ ಆರೋಪಗಳ ಬಗ್ಗೆ ಇದುವರೆಗೆ ಸಿ.ಓ.ಡಿ ಯಿಂದ ಯಾವ ತನಿಖೆಯೂ ನಡೆದಿಲ್ಲವಾದ್ದರಿಂದ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಜಾವಾ ಕಾರ್ಖಾನೆಯ ಬಗ್ಗೆ

1681 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ), ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಾವಾ ಕಾರ್ಖಾನೆಯ ಬೀಗಮುದ್ರೆ ತೆರೆಸುವ ಬಗ್ಗೆ ಸರ್ಕಾರ ಯಾವುದಾದರೂ ಪ್ರಯತ್ನ ಮಾಡಿದೆಯೆ;

ಆ) ಅಕ್ರಮವಾಗಿ ಬೀಗಮುದ್ರೆ ಹಾಕಿರುವುದರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

ಅ) ಈ ಬಗ್ಗೆ ಸಹಾಯಕ ಕಾರ್ಮಿಕ ಆಯುಕ್ತರು, ಮೈಸೂರು ಹಾಗೂ ಕಾರ್ಮಿಕ ಆಯುಕ್ತರು ಬೆಂಗಳೂರು, ಇವರ ಮುಂದೆ ಸಂಧಾನ ಸಭೆ ನಡೆಸಲಾಗಿದ್ದು, ಆಡಳಿತ ವರ್ಗದವರ ಗೈರು ಹಾಜರಿಯಿಂದಾಗಿ ಯಾವುದೇ ಪರಿಹಾರ ಸಾಧ್ಯವಾಗಿಲ್ಲ. ಆದ್ದರಿಂದ ಬೀಗಮುದ್ರೆಯನ್ನು ಕೂಡಲೇ ನಿಷೇಧಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಆಡಳಿತವರ್ಗದವರು ಮಾತುಕತೆಗೆ ಸಿಗುತ್ತಿಲ್ಲವಾದ್ದರಿಂದ ಬೀಗಮುದ್ರೆಯ ನಂತರ ಸಚಿವರ ಮಟ್ಟದಲ್ಲಿ ಮಾತುಕತೆ ನಡೆದಿಲ್ಲ. ಆದರೆ ಬೀಗಮುದ್ರೆಗಿಂತ ಮುಂಚೆ, ಮಾನ್ಯ ಕಾರ್ಮಿಕ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಮುಂದೆ ಸಭೆ ನಡೆಸಿದ್ದು ಕಾರ್ಮಿಕರ ಹಾಗೂ ಆಡಳಿತ ವರ್ಗದ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ಚರ್ಚೆ ನಡೆಸಲಾಗಿದೆ.

ಬೀಗಮುದ್ರೆಯ ನಂತರ ವ್ಯವಸ್ಥಾಪಕ ನಿರ್ದೇಶಕರು ಕಾರ್ಖಾನೆ ಪುನರಾರಂಭಿಸುವ ಬಗ್ಗೆ ಯಾವುದೇ ಪ್ರಸ್ತಾಪದೊಡನೆ ಹಾಜರಾಗಿರುವುದಿಲ್ಲ. ಅವರು ಎಲ್ಲಿದ್ದಾರೆ ಎಂಬ ವಿಷಯವೇ ಗೊತ್ತಿರುವುದಿಲ್ಲ. ಕಾರ್ಮಿಕರ ಹಿತರಕ್ಷಿಸಲು ಸರ್ಕಾರ ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕಿತ್ತೂರು ಚೆನ್ನಮ್ಮನ ಸಮಾಧಿಯ ಸುತ್ತಲೂ ಹೂದೋಟ ಮಾಡುವುದು

1717 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಿಟಿಷರು ಕೂಡ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮನ ಸಮಾಧಿ (ಬೆಳಗಾಂ ಜಿಲ್ಲೆ, ಬೈಲಹೊಂಗಲ ನಗರದಲ್ಲಿರುವ)ಯ ಸುತ್ತಲೂ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಮಾಡುವ ಸಲುವಾಗಿ ಸರ್ಕಾರದವರು ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿರುವರು?

ಆ) 1991-92ನೇ ಸಾಲಿನಲ್ಲಿ ಇಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಒದಗಿಸುವರೇ?